7)	ಬೆಳಗಾಂ - ಬಾಗಲ್ ಕೋಟ್ - ರಾಯಚೂರು - ಮೆಹಬೂಬ್ ನಗರ (ಆಂಧ್ರಪ್ರದೇಶದಲ್ಲಿ)	336
8)	ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	283
9)	ಧಾರವಾಡ - ಲೋಂಡಾ - ಅನ್ ಮೋದ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	95
10)	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಷಿಕಾರಿಪುರ - ಶಿರಾಳಕೊಪ್ಪ - ಹುಬ್ಬಳ್ಳಿ - ಬಾಗಲ್ ಕೋಟ್ - ಹುನಗುಂದ	550
11)	ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ -4 ಮಧುಗಿರಿ - ಗೌರಿಬಿದನೂರು - ಚಿಕ್ಕ ಬಳ್ಳಾಪುರ - ಚಿಂತಾಮಣಿ - ಶ್ರೀನಿವಾಸಪುರ - ಮುಳಬಾಗಿಲು (ಬೆಂಗಳೂರು - ಮದ್ರಾಸ್ ರಾಷ್ಟ್ರೀಯ ಹೆದ್ದಾರಿ - 4)	160
12)	ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ	325
13)	ಬೆಂಗಳೂರು - ಕನಕಪುರ - ಮಳವಳ್ಳಿ - ನಂಜನಗೂಡು - ಸುಲ್ತಾನ ಬತ್ತೇರಿ - ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ	250
	ಒಟ್ಟು ಉದ್ದ :	4400 ಕಿ.ಮೀ.

1991 ನೇ ಇಸವಿಯ ಅಂತರ ರಾಷ್ಟ್ರೀಯ ಪ್ರವಾಸಿ ವರ್ಷದ ಬಗ್ಗೆ

1066 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991ನೇ ಇಸವಿಯ ಅಂತರ ರಾಷ್ಟ್ರೀಯ ಪ್ರವಾಸಿ ವರ್ಷವಾದುದರಿಂದ ಪ್ರವಾಸಿ ಕೇಂದ್ರಗಳಾದ ಬೇಲೂರು, ಹಳೇಬೀಡು, ಶ್ರವಣಬೆಳಗೊಳಗಳಲ್ಲಿ ಪ್ರವಾಸೋದ್ಯಮ ಇಲಾಖೆಯವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?*

ಆ) *ಈ ಕೇಂದ್ರಗಳಿಗೆ ಹೋಗುವ ಹಾಗೂ ಈ ಪಟ್ಟಣಗಳ ರಸ್ತೆಗಳು ದುಸ್ಥಿತಿಯಲ್ಲಿರುವುದನ್ನು ದುರಸ್ಥಿ ಮಾಡಲು ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) 1. ಭಾರತ ಸರ್ಕಾರವು ಗುರುತಿಸಲ್ಪಟ್ಟಿರುವ ಪ್ರವಾಸಿ ವೃತ್ತಗಳಲ್ಲಿ 7 ಪ್ರವಾಸಿ ವೃತ್ತಗಳು ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳ ಮೂಲಕ ಹಾದು ಹೋಗುತ್ತವೆ.

2. ಬೇಲೂರಿನಲ್ಲಿ ಕೇಂದ್ರ ಸರ್ಕಾರದ ಧನ ಸಹಾಯದಿಂದ ರೂ. 43.24 ಲಕ್ಷಗಳ ವೆಚ್ಚದಲ್ಲಿ ಪ್ರವಾಸಿ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

ಆ) ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳ , ಪ್ರವಾಸಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಡಾಂಬರೀಕರಣ, ರಸ್ತೆ ಅಗಲಗೊಳಿಸುವುದು ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಒಟ್ಟು ರೂ. 56.88 ಲಕ್ಷಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.